

# ಒಂದು ಪ್ರೀತಿಯ ಕತೆ

ಹಸುವನ್ನು ಕೊಟ್ಟಿಗೆಗೆ ಹೊಡೆದುಕೊಂಡು ಹೋಗಿ ಕಟ್ಟಿಹಾಕಿ ಹಿಂತಿರುಗುವಾಗ ಮೂಗ ತಟ್ಟನೆ ಅತಿಥಿಯನ್ನು ಕಂಡ. ಇಷ್ಟೊಂದು ಚೆನ್ನಾಗಿ ಉಡುಪು ಧರಿಸುವವರನ್ನು ಮೂಗ ಆ ಊರಿನಲ್ಲಿ ಕೆಲವರನ್ನು ಮಾತ್ರ ಕಂಡಿದ್ದ. ಆದ್ದರಿಂದ, ಅವರೆಚಪ್ಪರದ ಕೆಳಗೆ ಅವಿತುಕುಳಿತು ಅವನು ಆಗಂತುಕನನ್ನು ಸೂಕ್ಷ್ಮವಾಗಿ ಗಮನಿಸಿದ.

ಬಂದವನಿಗೆ ತನ್ನಷ್ಟು ಎತ್ತರವಿರಲಿಲ್ಲ. ಹಸುವಿನ ಹೊಳೆಯುವ ಕಪ್ಪು ಮೈಬಣ್ಣವೇ ಇತ್ತು ಆತನಿಗೂ. ಮುಖ ಮತ್ತು ಕೈಗಳು ಮಾತ್ರ ಹೊರಕ್ಕೆ ಕಾಣುತ್ತಿದ್ದವು. ಫಳಫಳಿಸುವ ಶರ್ಟು ಮತ್ತು ವೇಷ್ಟಿಯನ್ನು ಆತ ಧರಿಸಿದ್ದ. ಅರಸನಿರಬಹುದೇ ಎಂದು ಮೂಗ ಅನುಮಾನದಿಂದ ನೋಡಿದ. ಹಿಂದಿನ ದಿನವೂ, ಒಗೆಯಲು ನೀರು ಸೇದಿಕೊಡುವಾಗ ಅವಳು ರಾಜನ ಕತೆ ಹೇಳಿದ್ದಳು. ಹಾಗೆ ನೋಡಿದರೆ, ದಿನವೂ ರಾಜನ ಕತೆ ಹೇಳುತ್ತಿರುತ್ತಾಳೆ. ರಾಜನೊಬ್ಬ ಪೇಶಾಮಡಂತ ಎಂಬ ಹೆಣ್ಣುಮಗಳನ್ನು ಮಾತನಾಡುವಂತೆ ಮಾಡಿದ ಕತೆ. ರಾಜ ನಿಪುಣನಾಗಿದ್ದ, ಆತನ ವೇಷ ಭೂಷಣ ಹೊಳೆಯುತ್ತಿದ್ದವು. ಮಾತನಾಡುವುದಿಲ್ಲ ಎಂದು ನಿರ್ಧರಿಸಿ ಆ ಸುಂದರಿ ಹಾಗೆಯೇ ಕುಳಿತಳು. ಆಮೇಲೆ ರಾಜ ಒಂದೊಂದು ಕತೆ ಹೇಳಿ ಅವಳಿಂದ ಮಾತುಹೊರಡಿಸಿದ್ದ. ಆ ಕತೆ ಜ್ಞಾಪಿಸಿಕೊಂಡು ಮೂಗ ತುಂಬಾ ಹೊತ್ತು ನಕ್ಕ. ಹೇಗೆ ಅವಳು ಮಾತನಾಡುವಂತೆ ಮಾಡಿದನೆಂಬುದು ಅವನಿಗೆ ಮರೆತು ಹೋಗಿತ್ತು. ಇಂದು ಅವಳನ್ನು ಕೇಳಿದರೆ ಹೇಳುತ್ತಾಳೆ. ಈಗಲೇ ಹೋಗಿ ಕೇಳೋಣ. ಆದರೆ, ಈಗ ಆಕಾಶದಲ್ಲಿ ನಕ್ಷತ್ರಗಳಿಲ್ಲ. ಅವಳು ಈಗ ಕೊಳದಲ್ಲಿ ಮೀಯುತ್ತಿರಬಹುದು. ಆಗ ಕೇಳಬಾರದಲ್ಲ. ಒಮ್ಮೆ ತಾನು ಕೊಳದ ದಡದಲ್ಲಿ ನಿಂತಿದ್ದಾಗ...

'ಇಲ್ಲಿ ಯಾರು ಇಲ್ವಾ?' ಅತಿಥಿ ಕೇಳಿದ. ಮೂಗ ಬೇಗನೆ ಒಳಕ್ಕೆ ಓಡಿದ. ತನ್ನನ್ನು ಕೇಳಿರಬಹುದೆ? ತಾನು ಮೂಗನೆಂದು ತಿಳಿಯದ ಮಂದಿ ಏನಾದರೂ ಕೇಳಿದರೆ ಮೂಗ ಅಲ್ಲಿ ಇರುತ್ತಿರಲಿಲ್ಲ. ಅದೊಮ್ಮೆ ಕಲಿತ ಪಾಠ ಕೂಡ. ದೇವಸ್ಥಾನದ ಮುಂದಿನ ಅರಳೀಕಟ್ಟೆಯ ಮೇಲೆ ತಾನು ಸುಮ್ಮನೆ